





ಉತ್ತರಾಖಂಡದ ಹಸಿರು ಬೆಟ್ಟಗಳ ಮಡಿಲಿನಲ್ಲಿ ಅಡಕವಾಗಿರುವ ಅಂದದ ಜಲಪಾತ ಕೆಂಪ್ಟಿ ಫಾಲ್ಸ್ ಟೆಹ್ರಿ ಗರ್ವಾಲ್ ಜಿಲ್ಲೆಯ ರಾಮ್‌ಗಾವ್‌ನಲ್ಲಿದೆ. ಮಸೂರಿಯಿಂದ 13 ಕಿ. ಮೀ. ದೂರದಲ್ಲಿರುವ ಈ ಜಲಪಾತ ಪರ್ವತರಾಜ್ಯದ ಪ್ರೇಕ್ಷಣೀಯ ತಾಣಗಳಲ್ಲಿ ಒಂದೆನ್ನಿಸಿದೆ.

ಸುಮಾರು 4500 ಅಡಿಗಳ ಎತ್ತರದಿಂದ ವೇಗವಾಗಿ ಹರಿಯುವ ನೀರು, ಬಹುಧಾರೆಗಳಾಗಿ ಟಿಸಿಲೊಡೆದು, 40 ಅಡಿ ಆಳದಲ್ಲಿರುವ ಕಂದರಕ್ಕೆ ರಭಸದಿಂದ ಧುಮುಕುವ ಜಲಪಾತದ ದೃಶ್ಯ ರಮಣೀಯ; ಭೋರ್ಗರೆತ ಕರ್ಣಾನಂದಕರ. ಹೀಗೆ ಧುಮುಕಿದ ಶುಭ್ರ ನೀರು ಕಿರಿದಾದ ಕೊಳದಲ್ಲಿ ಶೇಖರಗೊಂಡು ಪ್ರವಾಸಿಗರ ಈಜಿನ ಮೋಜಿಗೆ ಅನುವು ಮಾಡಿಕೊಟ್ಟಿದೆ. ಈಜಲು ಅಗತ್ಯವಾದ ಪರಿಕರಗಳನ್ನು ಪ್ರವಾಸಿಗರಿಗೆ ಬಾಡಿಗೆಗೆ ನೀಡುವ ಅನೇಕ ಅಂಗಡಿಗಳು ಇಲ್ಲಿವೆ. ಹಾಲ್ನೊರೆಯಂತಿರುವ ಜಲಪಾತದ ಧವಳಧಾರೆಗೆ ಮೈಯೊಡ್ಡಿ ಪಡೆಯುವ ಶೀತಲ ಜಲದ ಜಳಕದ ಅನುಭವ ಅನನ್ಯ.

1835ರ ಆಸುಪಾಸಿನಲ್ಲಿ ಬ್ರಿಟಿಷ್ ಅಧಿಕಾರಿ ಜಾನ್ ಮೆಕಿನನ್ ಅಭಿವೃದ್ಧಿಗೊಳಿಸಿದ ಈ ಸ್ಥಳದಲ್ಲಿ ಟೀ ಪಾರ್ಟಿಗಳನ್ನು ಏರ್ಪಡಿಸಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ, ಕೆಂಪ್ಟಿ ಫಾಲ್ಸ್ ಎಂಬ ಹೆಸರಿನ ಮೂಲ 'ಕ್ಯಾಂಪ್ ಟೀ' ಇರಬಹುದೆಂದು ಹೇಳಲಾಗುತ್ತದೆ. ಈ ಸುಂದರ ಜಲಪಾತ ತಲುಪಲು ಕಡಿದಾದ ಕಾಲುದಾರಿಯಿದೆ. ಐದು ನಿಮಿಷಗಳಲ್ಲಿ ಸುಖವಾಗಿ ಪಯಣಿಸಬಹುದಾದ ರೋಪ್ ವೇ ಸಹ ಇದೆ.

ಪಾದಚಾರಿ ಮಾರ್ಗಗಳು ಮತ್ತು ಸೇತುವೆಗಳು ಸನಿಹದ ವೀಕ್ಷಣಾ ಅಟ್ಟಣಿಗೆಗಳಿಗೆ ತಲುಪಿಸುತ್ತವೆ. ಈ ಕಾಲುದಾರಿ ಬದಿಯ ಗೋಡೆಗಳ ಮೇಲಿನ, ಮೂರು ಆಯಾಮಗಳ ವರ್ಣಮಯ ಭಿತ್ತಿಚಿತ್ರಗಳು ಪರ್ವತ ಪ್ರದೇಶದ ಜನಜೀವನವನ್ನು ಸಂಕ್ಷಿಪ್ತವಾಗಿ ಪರಿಚಯಿಸುತ್ತವೆ. ವಾಟರ್ ಪಾರ್ಕ್‌ನಲ್ಲಿ ಅನೇಕ ಜಲಕ್ರೀಡೆಗಳಿಗೆ ಅವಕಾಶವಿದೆ. ಮನರಂಜನೆ, ಸಾಹಸ ಕ್ರೀಡೆ, ಮತ್ತು ಊಟೋಪಚಾರದ ವ್ಯವಸ್ಥೆಯೂ ಇದೆ.